# ಟ್ರಾಫಿಕ್ ವಾರ್ಡನ್ ಆರ್ಗನೈಜೇಷನ್

- **ಸಾರ್ವಜನಿಕ ವಲಯದಲ್ಲಿ ಸೇವಾ ಮನೋಭಾವವುಳ್ಳ ಸ್ಥಳೀಯ ನಾಗರೀಕರುಗಳನ್ನು ನೊಂದಾಯಿಸಿಕೊಂಡು ಅವರಿಗೆ ಸಂಚಾರ ನಿಯಂತ್ರಣ ಕಾರ್ಯದ ತರಬೇತಿ ನೀಡಿ ಮೈಸೂರು ನಗರದಲ್ಲಿ, ಸಂಚಾರ ನಿಯಂತ್ರಣ ಕಾರ್ಯಕ್ಕೆ ಸಹಕಾರ ಪಡೆಯುವ ಉದ್ದೇಶದಿಂದ 1997 ನೇ ವರ್ಷದಲ್ಲಿ Traffic Warden Organisation- 1997, Mysuru city Regulations Dt. 31.07.1997** ಎಂಬ **ನಾಮಾಂಕಿತದಡಿಯಲ್ಲಿ ನಿಯಮಗಳನ್ನು ರೂಪಿಸಿ ಮೈಸೂರು ಉಪನೊಂದಣಿ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟು ಪ್ರಾರಂಭವಾಗಿದೆ.**

**:ದ್ಯೇಯೋದ್ದೇಶಗಳು:**

- ಸಂಚಾರ ಪೊಲೀಸರ ನೆರವಿನೊಂದಿಗೆ ರಸ್ತೆ ಸುರಕ್ಷತೆ, ಸಂಚಾರ ತಿಳುವಳಿಕೆ ಶಿಕ್ಷಣ ಶಿಭಿರ ನಡೆಸುವುದು.
- ವಾಹನ ಮತ್ತು ಪಾದಚಾರಿಗಳ ಸುಗಮ ಸಂಚಾರಕ್ಕೆ ಸಂಚಾರ ಪೊಲೀಸರಿಗೆ ಸಹಕಾರ ನೀಡುವುದು.
- ಸಂಚಾರ ಪೊಲೀಸರ ಸಹಯೋಗದಿಂದ ಶಾಲಾ ಮಕ್ಕಳಿಗೆ ರಸ್ತೆ ಸುರಕ್ಷತೆ ಮತ್ತು ನಿಯಮಗಳ ಶಿಭಿರ ನಡೆಸಿ ಮಾರ್ಗದರ್ಶನ ನೀಡುವುದು.

- **ಟ್ರಾಫಿಕ್ ವಾರ್ಡನ್ ರವರುಗಳು ಸ್ವ ಇಚ್ಛೆಯಿಂದ ಬಂದು ಸಂಜೆಯ ವೇಳೆ ಸಂಚಾರ ನಿಯಂತ್ರಣ ಕಾರ್ಯಕ್ಕೆ ಸಹಕರಿಸುತ್ತಾರೆ . ಉಳಿದ ಟ್ರಾಫಿಕ್ ವಾರ್ಡನ್ ರವರುಗಳು ವಿಶೇಷ ಬಂದೋಬಸ್ತ್ ಹಾಗೂ ಗಣ್ಯರುಗಳ ಆಗಮನದ ಬಂದೋಬಸ್ತ್ ಸಂಧರ್ಭದಲ್ಲಿ ಸಂಚಾರ ನಿಯಂತ್ರಣಕ್ಕೆ ಸಹಕರಿಸುವುದು ಹಾಗೂ ಶಾಲಾ ಕಾಲೇಜುಗಳಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ ಶಿಬಿರಗಳನ್ನು ನಡೆಸುವ ಮತ್ತು ಪೊಲೀಸ್ ಇಲಾಖಾ ಸಮಾರಂಭಗಳಲ್ಲಿ ಭಾಗವಹಿಸಿ ಸಹಕರಿಸುತ್ತಿದ್ದಾರೆ.**











